ಅಧ್ಯಕ್ಷರು : ಸಭಾ ನಾಯಕರು ಮಾತನಾಡುವಾಗ ಮಾತನಾಡಬಾರದೆಂಬ ಸಾಮಾನ್ಯ ಸೌಜನ್ಯವೂ ಇಲ್ಲವಲ್ಲಾ, ಇದೇನಿದು ?

ಶ್ರೀ ಬಿ.ಎಸ್. ಯಡಿಯೂರಪ್ಪ : ಆದುದರಿಂದ, ಈಗಾಗಲೇ ಜಸ್ಟೀಸ್ ಮೋಹನ್ ಕುಮಾರ್ ಅವರಿಂದ ತನಿಖೆಯಾಗುತ್ತಿರುವುದರಿಂದ, ಆ ತನಿಖಾ ವರದಿ ಹೊರಗೆ ಬರಲಿ, ಯಾರದೇನು ಎಂದು ಬಣ್ಣ ಬಯಲಾಗಲಿ. ರೇವಣ್ಣನವರು ಅಪೇಕ್ಷೆಪಟ್ಟರೆ, ಈ ಮನೆ ಅಪೇಕ್ಷೆ ಪಟ್ಟರೆ, ತಾವು PWD ಸಚಿವರಾಗಿದ್ದಾಗ, ಪವರ್ ಮಿನಿಸ್ಟರ್ ಆಗಿದ್ದಾಗ, ಹೀಗೆ ಹತ್ತಾರು ಉದಾಹರಣೆಗಳಿದ್ದಾವೆ. ನಿಮಗೆ ಪ್ರತಿನಿತ್ಯ ಯಾವ್ಯಾವ ಮಾಹಿತಿ ನಿಮಗೆ ಬೇಕೆನ್ನುತ್ತೀರೊ ಎಲ್ಲಾ ದಾಖಲೆಗಳನ್ನು ಈ ಮನೆಗೆ ತಂದಿಡುತ್ತೇನೆ. ಏನೇನಾಯಿತು, ಟೆಂಡರ್ ಪ್ರಕ್ರಿಯೆ ಹೇಗಾಯಿತು, ಎಷ್ಟಿಮೇಟ್ ಏನಾಯಿತು, ಹೇಗೆಲ್ಲ ಏಜೆನ್ಸಿಗೆ ಕೊಟ್ಟಿದ್ದಿರಿ,. ಅನೇಕ ಚರಿತ್ರೆಗಳ ವಿವರಗಳಿದ್ದಾವೆ. ಕೇವಲ ಒಂದನ್ನು ಬಿಚ್ಚಿಟ್ಟಿದ್ದೇನೆ ಅದನ್ನು ಜೀರ್ಣ ಮಾಡಿಕೊಳ್ಳಿ, ಉಳಿದದ್ದಕ್ಕೆ ಸಮಯ ಬಂದಾಗ ನಾನು ನಿಮಗೆ ಉತ್ತರ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಲಾಗಿದೆ, ಈ ವಿಷಯ ಇಲ್ಲಿಗೆ ಮುಕ್ತಾಯಗೊಂಡಿದೆ, ಮತ್ತೆ ಮತ್ತೆ ನೀವು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ, ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮಧ್ಯಾಹ್ನಾ 2 ಗಂಟೆ 4 ನಿಮಿಷಕ್ಕೆ ಮುಂದೂಡಲಾಯಿತು)

(ಸದನದ ಕಲಾಪವು 3 ಗಂಟೆ 20 ನಿಮಿಷಕ್ಕೆ ಪ್ರಾರಂಭವಾಯಿತು.

ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಈಗ ಶಾಸನ ರಚನೆ, ವಿಧೇಯಕವನ್ನು ಹಿಂದಕ್ಕೆ ಪಡೆಯುವುದು.

ಡಾ: ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ, ಅದನ್ನು ಏನು ಮಂಡನೆ ಮಾಡುವುದಿಲ್ಲವೇ?

ಅಧ್ಯಕ್ಷರು : ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ನೀವು ಯಾವುದೇ ಬಿಲ್‌ನ್ನು introduce ಮಾಡಬೇಕಾದಾಗ ಸಭೆಯ ಅನುಮತಿಯನ್ನು ಪಡೆದು ಮಾಡಬೇಕಾಗುತ್ತದೆ. ಇದನ್ನು ಜನವರಿಯಲ್ಲಿ ಬೆಳಗಾಂನಲ್ಲಿ ನಡೆದಂತಹ ಸೆಷನ್‌ನಲ್ಲಿ introduce ಮಾಡಿದಿರಿ. ಈಗ ನೀವು ಇದನ್ನು ಯಾವ ಕಾರಣಕ್ಕೋಸ್ಕರ ವಾಪಸ್ಸು ತೆಗೆದುಕೊಳ್ಳುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ನನಗೆ ಏನು ಅನುಮಾನ ಬರುತ್ತಿದೆ ಎಂದರೆ ನೀವು ಬೆಳಗಾಂನಲ್ಲಿ introduce ಮಾಡಿ ಈಗ ಮತ್ತೆ ವಾಪಸ್ಸು ತೆಗೆದುಕೊಳ್ಳುತ್ತಿದ್ದೀರಿ ಎಂದರೆ ನಾಳೆ Corporation ಚುನಾವಣೆ ಇದೆ ಎನ್ನುವ ಕಾರಣಕ್ಕೋಸ್ಕರ ವಾಪಸ್ಸು ತೆಗೆದುಕೊಳ್ಳುತ್ತಿದ್ದೀರಾ? ಏನು ವಿಷಯ ಹೇಳಿ. ಬಹುಶ: ಇದನ್ನು introduce ಮಾಡಿ ವಾಪಸ್ಸು ತೆಗೆದುಕೊಳ್ಳುವುದರ ಬದಲು ನೀವು ಈ ಬಿಲ್‌ನ್ನು ತರುವುದೇ ಇಲ್ಲವೆಂದು ಹೇಳುವುದು better. ಇಂತಹ ನಿರ್ದಿಷ್ಟ ಕಾರಣಕ್ಕೆ ನಾವು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಒಳ್ಳೆಯದು. ಇದು ಏನಿದು ಅರ್ಥವಾಗುವುದಿಲ್ಲ. ಏಕೆಂದರೆ ಒಂದು ಬಿಲ್‌ನ್ನು ತರಬೇಕಾದಂತಹ ಸಂದರ್ಭದಲ್ಲಿ ನೀವು ಇದನ್ನು ಶಾಸಕಾಂಗ ಪಕ್ಷದಲ್ಲಿ ಚರ್ಚೆ ಮಾಡಿ, ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಿ ತರುತ್ತೀರಿ. ಆದರೆ ಮೂರು ತಿಂಗಳಿನಲ್ಲಿ ಏನು ಬದಲಾವಣೆಯಾಯಿತು ಎಂದು ನನಗೆ ಅರ್ಥವಾಗುವುದಿಲ್ಲ. ಇವತ್ತು ಏಕಾಏಕಿ ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಯಾವ ಕಾರಣಕ್ಕೋಸ್ಕರ ತೆಗೆದುಕೊಳ್ಳುತ್ತೀರಿ ಎನ್ನುವುದು ಬಹಳ ಮುಖ್ಯವಾಗುತ್ತದೆ. ನೀವು ಕಾರಣ ಕೊಟ್ಟು ಸಭೆಯ ಅನುಮತಿಯನ್ನು ಪಡೆದುಕೊಂಡು ನೀವು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಈ ರೀತಿಯಾಗಿ ನೀವು introduce ಮಾಡುವುದು ತಡವಿಲ್ಲ, ವಾಪಸ್ಸು ತೆಗೆದುಕೊಳ್ಳುವುದು ತಡವಿಲ್ಲವೆಂದರೆ ನೀವು ಮಾಡುತ್ತಿರುವುದು ಬರೀ ರಾಜಕೀಯ ಎನ್ನುವುದು ಬಿಟ್ಟರೆ ಬೇರೆ ಏನೂ ಕಾಣುತ್ತಿಲ್ಲ. ರಾಜಕಾರಣ ಮಾಡುವುದಕ್ಕೋಸ್ಕರ, ಜನರ ಭಾವನೆಗಳನ್ನು ಕೆರಳಿಸುವುದಕ್ಕೋಸ್ಕರ ಆ ರೀತಿಯಾಗಿ ಮಾಡುತ್ತಿದ್ದು, ನೀವು

ಬಿಲ್‌ನ್ನು introduce ಮಾಡತಕ್ಕಂಥಾದ್ದರಲ್ಲಿ ರಾಜಕಾರಣ ಮಾಡಬಾರದು ಎಂದು ನಮ್ಮ ಉದ್ದೇಶ.

ಅಧ್ಯಕ್ಷರು : ಈಗ 107ರ ಪ್ರಕಾರ ವಾಪಸ್ಸು ಪಡೆಯುವುದಕ್ಕೆ ಅವಕಾಶ ಇದೆ. ಅದಕ್ಕೆ ಏಕೆ ಇನ್ನೊಂದು ಚರ್ಚೆ. ಅವರಿಗೆ ಎಲ್ಲಾ ಅಧಿಕಾರ ಇದೆ. ಪ್ರತಿಯೊಂದಕ್ಕೂ ಚರ್ಚೆಯಾದರೆ ಹೇಗೆ? 107ರ ನಿಯಮದಲ್ಲಿ ಇದೆ, they can take back.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : ಆಯಿತು, ನಾವು ಏನು ಹೇಳುತ್ತಿದ್ದೇವೆಂದರೆ, ಅದನ್ನು ಯಾವತ್ತು introduce ಮಾಡಬಾರದು ಎನ್ನುವ ನಿಟ್ಟಿನಲ್ಲಿ ಹೇಳಿದೆವು. ಈ ಸಮಯದಲ್ಲಿ ವಾಪಸ್ಸು ತೆಗೆದುಕೊಳ್ಳುತ್ತೇವೆ ಎನ್ನುವುದು ಬೇಡ.

4. ಶಾಸನ ರಚನೆ:

ಅ) ವಿಧೇಯಕವನ್ನು ಹಿಂದಕ್ಕೆ ಪಡೆಯುವುದು

(1) ಕರ್ನಾಟಕ ಗೋಹತ್ಯೆ ಪ್ರತಿಬಂಧಕ ಮತ್ತು ಜಾನುವಾರು ಸಂರಕ್ಷಣಾ(ತಿದ್ದುಪಡಿ) ವಿಧೇಯಕ, 2009

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಕರ್ನಾಟಕ ಗೋಹತ್ಯೆ ಪ್ರತಿಬಂಧಕ ಮತ್ತು ಜಾನುವಾರು ಸಂರಕ್ಷಣಾ (ತಿದ್ದುಪಡಿ) ವಿಧೇಯಕ 2009 ಸಂಖ್ಯೆ 14 ಹಿಂದಕ್ಕೆ ಪಡೆಯಲು ಸಭೆಯು ಅನುಮತಿಯನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆಯನ್ನು ಮಂಡಿಸಲಾಯಿತು. ಈಗ ಪ್ರಸ್ತಾವನೆಯನ್ನು ...

ಶ್ರೀ ಟಿ.ಬಿ ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನೀವು introduce ಮಾಡಿದ್ದು ಏಕೆ? ವಾಪಸ್ಸು ತೆಗೆದುಕೊಂಡಿದ್ದು ಏಕೆ? ನೀವು ಏಕೆ ವಾಪಸ್ಸು ತೆಗೆದುಕೊಳ್ಳುತ್ತೀರೆಂದು ಹೇಳಿ.

ಅಧ್ಯಕ್ಷರು : 107 ರಲ್ಲಿ it is very clear.